

ನಿಲ್ಲಿಸಬಹುದು ಆದರೆ ಉದುರುತ್ತಿರುವ ತಲೆಗೂದಲನ್ನು ತಡೆಯುವ ಮಂತ್ರ ಮಾತ್ರ ಇಲ್ಲಿಯವರೆಗೆ ಯಾರಿಗೂ ಸಿದ್ಧಿಸಿಲ್ಲ. ಅನಾರೋಗ್ಯದ ಸಮಸ್ಯೆ, ತಲೆಯಲ್ಲಿ ಹೊಟ್ಟಿನ ಸಮಸ್ಯೆ, ಹಾರ್ಮೋನುಗಳ ವ್ಯತ್ಯಾಸ, ದೇಹದಲ್ಲಿ ಖನಿಜಾಂಶಗಳ ಕೊರತೆ, ಮಾನಸಿಕ ಒತ್ತಡಗಳು (ಸ್ಟ್ರೆಸ್) ಮತ್ತು ನೀರಿನ ಸಮಸ್ಯೆ ತಲೆಯಲ್ಲಿ ಕೂದಲು ಉದುರುವಿಕೆಗೆ ಇರುವ ಪ್ರಮುಖ ಕಾರಣಗಳು ಎಂದು ವೈದ್ಯರು ಹೇಳುತ್ತಾರೆ. ಚಿಕ್ಕವಯಸ್ಸಿನಲ್ಲಿ ಕೂದಲು ಉದುರುತ್ತಿದ್ದವರು ವೈದ್ಯಕೀಯ ನೆರವು ಪಡೆದರೆ ಈ ಕಾರಣಗಳಿಂದ ಉದುರುತ್ತಿರುವ ಕೂದಲನ್ನು ಸ್ವಲ್ಪಮಟ್ಟಿಗಾದರೂ ತಡೆಯಬಹುದು. 'ಮದುವೆಗೆ ಮುಂಚೆ ನನ್ನ ಜಡೆ ಬೆನ್ನಹಿಂದೆ ಕಾಲಿನವರೆಗೆ ಮುಟ್ಟುತ್ತಿತ್ತು, ನಿಮ್ಮನ್ನು ಮದುವೆಯಾದಾಗಿನಿಂದ ನಿಮ್ಮ ಮತ್ತು ನಿಮ್ಮ ಮಕ್ಕಳ ಹತ್ತಿರ ಬಡಕೊಂಡು ಇರುವ ಕೂದಲೆಲ್ಲಾ ಉದುರಿಹೋಗಿ ಮೋಟು ಜಡೆಯವಳಾದೆ' ಎಂಬುದು ಬಹಳಷ್ಟು ಹೆಂಗಸರ ಅಳಲು. ಇದೇ ರೀತಿ 'ತಲೆಯ ಅರ್ಧಕೂದಲು ಹೆಂಡತಿ ಮತ್ತು ಮಕ್ಕಳು ಕಿತ್ತರೆ ಇನ್ನರ್ಧ ಕೂದಲು ಆಫೀಸಿನಲ್ಲಿ ಬಾಸ್ ಕಿತ್ತಾಕಿದ' ಎನ್ನುವುದು ಬಹಳಷ್ಟು ಗಂಡಸರ ದೂರು. ಆದರೆ ವಯಸ್ಸಾದ ಮೇಲೆ 'ಮೇಲ್ ಬಾಲ್ಡ್ನೆಸ್' ನಿಧಾನವಾಗಿ ಅಡಿಯಿಟ್ಟರೆ ಅದಕ್ಕೆ ಯಾರೇನು ಮಾಡಲು ಸಾಧ್ಯ?.



ಕಾಲೇಜಿನಲ್ಲಿ ಓದುತ್ತಿದ್ದಾಗ ನನ್ನ ಸ್ನೇಹಿತನೊಬ್ಬ ತಲೆ ತುಂಬಾ ಗುಂಗುರು ಕೂದಲಿನಿಂದ ಕಾಲೇಜಿನಲ್ಲಿ ಬಹಳ ಹ್ಯಾಂಡ್‌ಸಮ್ ಎಂದು ಪ್ರಖ್ಯಾತನಾಗಿದ್ದ. ಕಾಲೇಜಿಗೆ ಸೇರಿದಾಗ ಮೊದಲನೆ ವರ್ಷ ಇದ್ದ ಕೂದಲು ಬರುಬರುತ್ತಾ ಬರಗಾಲಕ್ಕೆ ಸಿಕ್ಕ ರಾಗಿಯ ಪೈರಿನಂತೆ ಒಣಗುತ್ತಾ, ಉದುರುತ್ತಾ, ಕೊನೆಯ ವರ್ಷ ಪದವಿ ಮುಗಿಸುವಷ್ಟರಲ್ಲಿ ತೂತುಬಿದ್ದ ಅಣೆಕಟ್ಟೆಯಿಂದ ವೇಗವಾಗಿ ಖಾಲಿಯಾದ ನೀರಿನಂತೆ, ಶಾಸ್ತ್ರಕ್ಕಾದರೂ ಒಂದು ಕೂದಲು ಇಲ್ಲದಂತೆ ತಲೆಪೂರ್ತಿ ಖಾಲಿಯಾಯಿತು. ಮೊದಮೊದಲು ಅವನ ಸುತ್ತಾ ಸುತ್ತುತ್ತಿದ್ದ ಹುಡುಗಿಯರ ಸಂಖ್ಯೆ, ಕೂದಲು ಉದುರುತ್ತಾ ಹೋದಂತೆ ಕ್ರಮೇಣ ಕಡಿಮೆಯಾಗಿ ಕೊನೆಗೆ ಹುಡುಗಿಯರು ಮತ್ತು ಕೂದಲು ಎರಡೂ ಖಾಲಿಯಾದವು. ಅವನು ಕೂದಲು ಬೀಳುವುದನ್ನು ತಡೆಯಲು ಯಾವುದೇ ಪ್ರಯತ್ನಪಟ್ಟಿಲ್ಲವೇ? ಎಂದು ಯಾರೂ ಪ್ರಶ್ನಿಸುವ ಅಗತ್ಯವಿಲ್ಲ. ಏಕೆಂದರೆ ಗಂಡಿರಲಿ ಅಥವಾ ಹೆಣ್ಣಿರಲಿ, ಬೀಳುತ್ತಿರುವ ತಲೆಗೂದಲನ್ನು ಉಳಿಸಿಕೊಳ್ಳಲು ನಡೆಸುವ ಹೋರಾಟವು ರಾಜ್ಯವನ್ನುಳಿಸಿಕೊಳ್ಳಲು ರಾಜರು ನಡೆಸುವ ಯಾವುದೇ ಪಾಣಿಪತ್ ಯುದ್ಧಕ್ಕಿಂತಲೂ ಕಡಿಮೆಯೇನಲ್ಲ.

ಉದುರುತ್ತಿರುವ ಕೂದಲನ್ನು ಉಳಿಸಿಕೊಳ್ಳಲು ಈತ ಮೊದಲಿಗೆ ತಲೆಯಲ್ಲಿ ಹೊಟ್ಟಿರಬೇಕೆಂದು ಅದನ್ನು ನಿವಾರಿಸುವ ತಂತ್ರಗಳನ್ನು ಶುರು ಮಾಡಿದ. ಅದುವರೆಗೂ ಯಾರ ಮಾತನ್ನೂ ಕೇಳದೆ ತಲೆಗೆ ಎಣ್ಣೆ ಹಚ್ಚಿಕೊಳ್ಳದೆ ಸಿನಿಮಾ ಹೀರೋನಂತೆ ಕೂದಲು ಹಾರಾಡಿಸಿಕೊಂಡು ಓಡಾಡುತ್ತಿದ್ದ ಈತ, ಈಗ ತಲೆಗೆ ಎಣ್ಣೆ, ಕಡಲೆಹಿಟ್ಟು, ಸೀಗೆಕಾಯಿ ಮತ್ತು ವಿವಿಧ ಬಗೆಯ ಹೊಟ್ಟು ನಿವಾರಕ ಶ್ಯಾಂಪುಗಳ ಬಳಕೆ ಶುರುಮಾಡಿದ. ಫ್ಯಾನ್ ಮತ್ತು ಎ.ಸಿಗೆ ತಲೆ ಒಡ್ಡುವುದನ್ನು ಕಡಿಮೆ ಮಾಡಿದ. ಯೂಟ್ಯೂಬ್ ಚಾನೆಲ್ ಪಂಡಿತರು ಹೇಳುವ ವಿವಿಧ ಬಗೆಯ ಪ್ರಯೋಗಗಳನ್ನು ತಲೆಯ ಮೇಲೆ ಪ್ರಯೋಗಿಸುವುದು, ವಿಟಮಿನ್, ಖನಿಜಾಂಶದ ಮಾತ್ರೆಗಳ ಸೇವನೆ, ಆಯುರ್ವೇದಿಕ್, ಹೋಮಿಯೋಪಥಿ ತೈಲಗಳ ಬಳಕೆ ಮಾಡಿದರೂ 'ನಾ ನಿಲ್ಲುವವಳಲ್ಲಾ' ಎಂದೂ ಕೂದಲು ಉದುರುತ್ತಲೇ ಹೋಯಿತು. ವೈದ್ಯರು ಹೇಳಿದರೆಂದು ರಾತ್ರಿ ನೆನೆಸಿಟ್ಟ ಬಾದಾಮಿ ವಾಲ್‌ನಟ್, ಪಿಸ್ತಾಗಳನ್ನು ಬೆಳಗ್ಗೆ ಖಾಲಿಹೊಟ್ಟೆಯಲ್ಲಿ ಸೇವನೆ ಮಾಡುವುದನ್ನು ಶುರುಮಾಡಿದ ಈತನ ಮನೆಯಲ್ಲಿರುವ ಡ್ರೈಫ್ರೂಟ್ಸ್ ಖಾಲಿಯಾದವೇ ಹೊರತು ಅವನ ತಲೆಗೂದಲು ಖಾಲಿಯಾಗುವುದು ನಿಲ್ಲಲಿಲ್ಲ. ತುಂಬಿದ ತಲೆಯವನಾಗಿ ವಿಶ್ವವಿದ್ಯಾಲಯ ಸೇರಿದ್ದ ಈತ ಕೊನೆಗೆ ಶರತ್‌ಕಾಲದಲ್ಲಿ ಎಲೆಗಳಿಲ್ಲದ ಮರದಂತೆ ಬೋಳುತಲೆಯವನಾಗಿ ಪದವಿ ಪಡೆದು ಕಣ್ಮರೆಯಾಗಿ ಹೋದ.